ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 29-06-1971.

*ಜ್ಞಾನದ ಪ್ರಕಾಶದಿಂದ ಪುರುಷಾರ್ಥದ ಮಾರ್ಗ ಸ್ಪಷ್ಟ* (नॉलेज की लाइट से पुरूषार्थ का मार्ग स्पष्ट)

ಎಲ್ಲರೂ ಪುರುಷಾರ್ಥ ಮಾಡುವವರೆಲ್ಲವೇ? ಪುರುಷಾರ್ಥದಿಂದ ವರ್ತಮಾನ ಸಮಯದಲ್ಲಿ ಯಾವ ಪ್ರಾಪ್ತಿಯ ಗುರಿಯಿದೆ? ದೇವ-ಪದವಿಯ ಪ್ರಾಪ್ತಿ ಭವಿಷ್ಯದ್ದು ಆದರೆ ವರ್ತಮಾನ ಸಮಯ ಪುರುಷಾರ್ಥದ ಯಾವ ಪ್ರಾಪ್ತಿಯ ಗುರಿಯಿದೆ? (ಪರಿಶ್ತಾ), ಫರಿಶ್ತಾನ ಮುಖ್ಯ ಯೋಗ್ಯತೆಗಳಾವವು? ಪರಿಶ್ತಾ ಆಗಲು ಬೇಕಾದ ಎರಡು ಯೋಗ್ಯತೆಗಳಾವವು? ಒಂದು ಪ್ರಕಾಶ (ಲೈಟ್), ಎರಡನೆಯದು ಶಕ್ತಿ ಬೇಕು. ಎರಡರ ಅವಶ್ಯಕತೆಯಿದೆ. ಪ್ರಕಾಶ ಮತ್ತು ಶಕ್ತಿ ಎರಡೂ ಪರಿಶ್ತೆಯ ಜೀವನದಲ್ಲಿ ಸ್ಪಷ್ಟವಾಗಿ ಕಂಡುಬರುವವು. ಪ್ರಕಾಶದ ಪ್ರಾಪ್ತಿಗೆ ವಿಶೇಷ ಯಾವ ಶಕ್ತಿ ಬೇಕು? ಶಕ್ತಿಗಳು ಬಹಳ ಇವೆ. ಆದರೆ ಶಕ್ತಿರೂಪ ಅಥವಾ ಪ್ರಕಾಶ ರೂಪವಾಗಲು ಒಬ್ಬೊಬ್ಬರು ಒಂದೊಂದು ಬೇರೆ-ಬೇರೆ ಗುಣ ಹೇಳಿ, ಒಂದಾಗಿದೆ ಮನನ ಮತ್ತು ಇನ್ನೊಂದು ಸಹನಶಕ್ತಿ. ಎಷ್ಟು ಸಹನಶಕ್ತಿಯಿರುತ್ತದೆಯೋ ಅಷ್ಟು ಸರ್ವಶಕ್ತಿವಂತನ ಸರ್ವಶಕ್ತಿಗಳು ಸ್ವತಃ ಪ್ರಾಪ್ತಿಯಾಗುತ್ತವೆ. ಜ್ಞಾನಕ್ಕೂ ಪ್ರಕಾಶವೆಂದು ಕರೆಯಲಾಗುತ್ತದೆ. ಪುರುಷಾರ್ಥದ ಮಾರ್ಗವನ್ನು ಸಹಜ ಮತ್ತು ಸ್ಪಷ್ಟ ಮಾಡಲು ಜ್ಞಾನದ ಬೆಳಕು ಬೇಕು. ಈ ಪ್ರಕಾಶಕ್ಕೆ ಮನನ ಶಕ್ತಿ ಬೇಕು. ಹಾಗಾದರೆ ಒಂದು ಮನನಶಕ್ತಿ ಮತ್ತೊಂದು ಸಹನಶಕ್ತಿ ಬೇಕು. ಈ ಎರಡೂ ಶಕ್ತಿಗಳು ಇದ್ದರೆ ಪರಿಶ್ತಾ ಸ್ವರೂಪದಲ್ಲಿ ಓಡಾಡುತ್ತಲೂ ಯಾರಿಗಾದರೂ ಸಾಕ್ಷಾತ್ಕಾರವಾಗಬಹುದು. ಸಹನಶಕ್ತಿಯಿಂದ ಸರ್ವಗುಣಗಳ ಪ್ರಾಪ್ತಿಯಾಗುತ್ತದೆ. ಸಹನಶಕ್ತಿಯಿರುವವರಲ್ಲಿ ನಿರ್ಣಯಶಕ್ತಿ, ಪರಿಶೀಲಿಸುವಶಕ್ತಿ, ಗಂಭೀರತೆಯಶಕ್ತಿ ಸಹಜವಾಗಿ ಒಂದರ ಜೊತೆಗೆ ಅನೇಕ ಬರುತ್ತವೆ. ಸಹನಶಕ್ತಿಯೂ ಅವಶ್ಯಕ ಮತ್ತು ಮನನಶಕ್ತಿಯೂ ಅವಶ್ಯಕ. ಮನಸ್ಸಿಗೆ ಮನನ ಶಕ್ತಿ ಮತ್ತು ಮಾತಿಗೆ ಹಾಗೂ ಕರ್ಮಕ್ಕೆ ಸಹನಶಕ್ತಿ, ಸಹನಶಕ್ತಿಯಿದ್ದರೆ ಏನೇ ಹೇಳಿದರೂ ಆದು ಸಾಧಾರಣವಾಗಿರುವುದಿಲ್ಲ. ಎರಡನೆಯದಾಗಿ, ಯಾವುದೇ ಕರ್ಮವನ್ನು ಮಾಡಿದರೂ ಅದು ಶಕ್ತಿಗಳ ಪ್ರಮಾಣದಲ್ಲಿರುವುದು. ಆದ್ದರಿಂದ ಮೂರೂ ಶಕ್ತಿಗಳ ಅವಶ್ಯಕತೆಯಿದೆ. ಸಹನ ಶಕ್ತಿಯವರು ಕಾರ್ಯದಲ್ಲಿಯೂ ಸಫಲರಾಗುತ್ತಾರೆ. ಸಹನಶಕ್ತಿಯ ಕೊರತೆಯ ಕಾರಣ ಕಾರ್ಯದ ಸಫಲತೆಯಲ್ಲಿಯೂ ಕೊರತೆ ಬರುತ್ತದೆ. ಸಹನಶಕ್ತಿಯವರದೇ ಅವ್ಯಕ್ತ ಸ್ಥಿತಿ ಅಥವಾ ಶುದ್ಧ ಸಂಕಲ್ಪದ ಸ್ವರೂಪದ ಸ್ಥಿತಿ ಇರುತ್ತದೆ. ಸಹನಶೀಲರ ಮುಖದಲ್ಲಿ ಕಾಂತಿಯಿರುತ್ತದೆ. ಎಂತಹ ಸಂಸ್ಕಾರದವರೇ ಇರಲಿ ತಮ್ಮ ಸಹನಶಕ್ತಿಯಿಂದ ಅದನ್ನು ಅಲ್ಪಕಾಲಕ್ಕೆ ಹತ್ತಿಕ್ಕುವರು, ಆದ್ದರಿಂದ ಎರಡೂ ಶಕ್ತಿಗಳು ಬೇಕು. ತಮ್ಮ ಪುರುಷಾರ್ಥದಲ್ಲಿ ಮನದ ಸಂಕಲ್ಪಗಳನ್ನು ನಡೆಸಲು ಸಹನಶಕ್ತಿ ಬೇಕು. ಅದನ್ನು ನಿಯಂತ್ರಣ ಶಕ್ತಿ ಎಂದು ಸಹ ಹೇಳುತ್ತಾರೆ. ಸಹನಶಕ್ತಿ ಇದ್ದರೆ ವ್ಯರ್ಥ ಸಂಕಲ್ಪಗಳನ್ನು ನಿಯಂತ್ರಿಸಬಹುದು. ಆದ್ದರಿಂದ ಈ ಎರಡೂ ಶಕ್ತಿಗಳ ಕಡೆಗೆ ಗಮನವಿಡಬೇಕು.

ನಂಬರವನ್ ವ್ಯಾಪಾರಿಯಾಗಲು ಯಾವ ವಿಧಿಯಿದೆ? ತಮ್ಮನ್ನು ವ್ಯಸ್ತರಾಗಿಸಿ ಕೊಳ್ಳುವುದರಿಂದ ನಂಬರವನ್ ವ್ಯಾಪಾರಿಯಾಗುವಿರಿ ಯಾರಿಗೆ ತಮ್ಮನ್ನು ಬ್ಯುಸೀಯಾಗಿಟ್ಟುಕೊಳ್ಳಲು ಬರುವುದಿಲ್ಲವೋ ಅವರು ಬಿಜಿನೆಸ್ ಮ್ಯಾನ್ ಆಗಲು ಯೋಗ್ಯರಲ್ಲ ಎಂದು ಹೇಳಲಾಗುತ್ತದೆ. ಇಲ್ಲಿ ವ್ಯಾಪಾರಿಯಾಗುವುದು ಎಂದರೆ ತಮ್ಮ ಸಂಪಾದನೆ ಮತ್ತು ಅನ್ಯರ ಸಂಪಾದನೆಯನ್ನೂ ಮಾಡಿಸುವುದು. ಅದಕ್ಕಾಗಿ ತಮ್ಮನ್ನು ತಾವು ಒಂದು ಕ್ಷಣವೂ ಖಾಲಿ ಇಟ್ಟುಕೊಳ್ಳಬಾರದು. ಯಾವ ನಂಬರಿನ ವ್ಯಾಪಾರಿಯಾಗಿದ್ದೀರಿ? ನಂಬರವನ್ ವ್ಯಾಪಾರಿಯಾಗಲು ಯಾವ ವಿಧಿಯಿದೆ? ತಮ್ಮನ್ನು ವ್ಯಸ್ತ ರಾಗಿಸಿಕೊಳ್ಳುವುದರಿಂದ ನಂಬರವನ್ ವ್ಯಾಪಾರಿಯಾಗುವಿರಿ ಯಾರಿಗೆ ತಮ್ಮನ್ನು ವ್ಯಸ್ತರಾಗಿಟ್ಟುಕೊಳ್ಳಲು ಬರುವುದಿಲ್ಲವೋ ಅವರು ಬಿಜಿನೆಸ್ ಮ್ಯಾನ್ ಆಗಲು ಯೋಗ್ಯರಲ್ಲ ಎಂದು ಹೇಳಲಾಗುತ್ತದೆ. ಇಲ್ಲಿ ಎಷ್ಟು ಪಡೆದುಕೊಳ್ಳುವಿರೋ ಅಷ್ಟು ಭವಿಷ್ಯದ ಸಿಂಹಾಸನವನ್ನು ಪಡೆದುಕೊಳ್ಳುವಿರಿ. ಒಳ್ಳೆಯ ಅವಕಾಶವಿದೆ. ಏನನ್ನು ಮಾಡಬಯಸುವಿರೋ ಮಾಡಬಹುದು. ಎಲ್ಲರಿಗೂ ಸ್ವಾತಂತ್ರ್ಯವಿದೆ. ಯಾರು ಎಷ್ಟು ಅವಕಾಶಗಳನ್ನು ಪಡೆದುಕೊಳ್ಳುತ್ತಾರೋ ಅಷ್ಟು ತಮ್ಮ ಸಿಂಹಾಸನದ ಗುರಿಯನ್ನು ಪಕ್ಕಾ ಮಾಡಿಕೊಳ್ಳುತ್ತಾರೆ. ವ್ಯಾಪಾರಿಯ ಅರ್ಥವಾಗಿದೆ - ಒಂದು ಸಂಕಲ್ಪವೂ

ವ್ಯರ್ಥವಾಗದಂತೆ ನೋಡಿಕೊಳ್ಳುವುದು. ಪ್ರತಿಯೊಂದು ಸಂಕಲ್ಪದಲ್ಲಿ ಸಂಪಾದನೆ. ಹೇಗೆ ಲೌಕಿಕ ವ್ಯಾಪಾರಿ ಒಂದೊಂದು ಪೈಸೆಯನ್ನು ಸಂಪಾದನೆ ಮಾಡಿ ಎಷ್ಟೊಂದು ಮಾಡುತ್ತಾನೆ. ಇಲ್ಲಿಯೂ ಸಹ ಒಂದೊಂದು ಕ್ಷಣ ಅಥವಾ ಸಂಕಲ್ಪದ ಸಂಪಾದನೆ ಮಾಡಿ ತೋರಿಸಿ. ಅವರಿಗೆ ನಂಬರವನ್ ವ್ಯಾಪಾರಿ ಎಂದು ಹೇಳಲಾಗುತ್ತದೆ. ಬುದ್ಧಿಗೆ ಇನ್ನೇನು ಕೆಲಸವಿದೆ. ಬುದ್ಧಿ ಇದರಲ್ಲಿಯೇ ವ್ಯಸ್ತವಾಗಿರಬೇಕು. ಎಲ್ಲಾ ಕಡೆಗಳಲ್ಲಿ ಸಮಾಪ್ತಿಯಾಗಿದೆಯಲ್ಲವೇ? ಅಥವಾ ಬುದ್ಧಿ ಹೋಗಲು ಸ್ವಲ್ಪ ಸ್ಥಾನ ಉಳಿದಿದೆಯೋ? ತಮ್ಮ ಹಳೆಯ ಸಂಸ್ಕಾರಗಳ ಕಡೆಗೂ ಸಮಾಪ್ತಿಯಾಯಿತು. ಬುದ್ಧಿಗೆ ಹೋಗಲು ಅದೇ ದಾರಿ, ಅದೇ ನೆಲೆಯಾಗಿದೆ. ಬುದ್ಧಿ ಹಳೆಯ ಸಂಸ್ಕಾರಗಳ ಕಡೆಗೆ ಹೋಗುವುದು ಅಥವಾ ತಮ್ಮ ಶರೀರದ ಲೆಕ್ಕಾಚಾರದ ಕಡೆಗೆ ಅಥವಾ ಮನದ ವ್ಯರ್ಥ ಸಂಕಲ್ಪಗಳ ಕಡೆಗೆ ಎಳೆಯುವುದು. ಇವೆಲ್ಲವೂ ಸಮಾಪ್ತಿಯಾಗಿವೆ ತಾನೇ? ಹೇಗೆ ಶಾರೀರಿಕ ರೋಗದ ಬಗ್ಗೆ ನಿಮಗೆ ತಿಳಿಯುತ್ತದೆಯೋ, ಇದು ಇಂತಹ ವ್ಯಾದಿ, ಇದಕ್ಕೆ ನಿವಾರಣೆ ಇದು ಎಂದು ಏಕೆಂದರೆ ನಿಮ್ಮ ಲಕ್ಷ್ಯವೇನೆಂದರೆ ಶರೀರವನ್ನು ಎಷ್ಟು ಸರಿಯಾಗಿ ಇಟ್ಟುಕೊಂಡರೆ ಅಷ್ಟು ಸೇವೆಯನ್ನು ಮಾಡಬಲ್ಲಿರಿ ಅಷ್ಟೇ, ಆದರೆ ಇದರಲ್ಲಿ ನಿಮ್ಮ ಸ್ವಾರ್ಥವಂತೂ ಏನೂ ಇಲ್ಲ ಸೇವಾರ್ಥ ನಿಮಿತ್ತ ಮಾತ್ರವಾಗಿ ಭಾವಿಸುತ್ತಿರುವಿರಿ. ಇದು ಸಾಕ್ಷಿ ಸ್ಥಿತಿ ತಾನೇ? ಈಗಿನ್ನು ಕೇವಲ ಒಂದೇ ಮಾರ್ಗ ಉಳಿದಿದೆ ಅನೇಕ ಮಾರ್ಗಗಳಿರುವ ಕಾರಣ ಬುದ್ಧಿ ಅಲೆದಾಡುತ್ತಿತ್ತು. ಆ ಎಲ್ಲಾ ಮಾರ್ಗಗಳು ಬಂದಾಗಿದೆಯಲ್ಲವೇ? ಸರ್ವಶಕ್ತಿವಂತನ ಸರಕಾರದ ಮುದ್ರೆ ಬಿದ್ದಿತು. ಸಮಸ್ಯೆ ಬಗೆಹರಿಯದ ಹೊರತು ಮುದ್ರೆ ತೆಗೆಯುವುದಿಲ್ಲ. ಈ ರೀತಿ ತಮ್ಮ ಪರಿಶೀಲನೆ ಮಾಡಿಕೊಳ್ಳಬೇಕು. ಕೆಲವರಿಗೆ ಅದೃಷ್ಟವಿದ್ದರೆ ಪರಿಸ್ಥಿತಿಗಳು ಕೂಡ ಸಹಾಯಕಾರಿ ಆಗುತ್ತಿರುತ್ತವೆ. ಅದೇ ರೀತಿಯಾಗಿ ಇಲ್ಲಿಯೂ ಕಲ್ಪಪೂರ್ವದ ಅದೃಷ್ಟ ಅಥವಾ ಡ್ರಾಮದ ನಿರ್ಣಯ ಅರ್ಥಾತ್ ಸ್ವಪುರುಷಾರ್ಥ ಕೂಡ ಇರುತ್ತದೆ ಅದರೊಂದಿಗೆ ಇವುಗಳ ಸಹಾಯ ಕೂಡ ಲಭಿಸುತ್ತದೆ. ದೈವೀ ಪರಿವಾರದಿಂದ ಮತ್ತು ಬಾಪ್ ದಾದಾರವರಿಂದ ಸಹಾಯದ ಬಹುಮಾನ ಇವರಿಗೆ ಲಭಿಸುತ್ತದೆ. ಬಾಪ್ ದಾದಾ ಅಥವಾ ದೈವೀ ಪರಿವಾರದಿಂದ ಯಾವ ವಿಧವಾದ ಬಹುಮಾನಗಳು ಲಭಿಸಿವೆಯೋ ಪರಿಶೀಲಿಸಿಕೊಳ್ಳಬೇಕು. ಗಣ್ಯ ವ್ಯಕ್ತಿಗಳಿಗೆ ಕಾಣಿಕೆ ಸಿಕ್ಕಾಗ ಅದನ್ನು ಷೋಕೇಸ್ನಲ್ಲಿ ಸಂಭಾಲನೆ ಮಾಡಿ ಇಡುತ್ತಾರೆ. ಅದರಿಂದ ತಮ್ಮ ದೇಶದ ಹೆಸರು ಪ್ರಸಿದ್ಧವಾಗುತ್ತದೆ. ಮತ್ತು ಇಲ್ಲಿ ಸಮಯಾನುಸಾರ ಸಿಕ್ಕಂತಹ ಕಾಣಿಕೆಯಿಂದ ಬಾಪ್ ದಾದಾರ ಮತ್ತು ಕುಲದ ಹೆಸರು ಪ್ರಸಿದ್ಧ ಮಾಡಬೇಕು.

ಆರಂಭದಲ್ಲಿ ತಾವು ಸೇವೆಗಾಗಿ ಹೋಗುವಾಗ ಜ್ಞಾನದ ಶಕ್ತಿ ಕಡಿಮೆಯಿತ್ತು ಆದರೆ ಸಫಲತೆ ಯಾವ ಶಕ್ತಿಯ ಆಧಾರದಿಂದ ಆಯಿತು? ತ್ಯಾಗ ಮತ್ತು ಸ್ನೇಹ, ಬುದ್ಧಿಯ ಎಳೆತ ಹಗಲು-ರಾತ್ರಿ ಬಾಬಾ ಮತ್ತು ಯಜ್ಞದ ಕಡೆಗಿತ್ತು ಹೃದಯದ ಆಳದಿಂದ ಬಾಬಾ ಮತ್ತು ಯಜ್ಞ ಎಂದು ಬರುತ್ತಿತ್ತು. ಇದೇ ಸ್ನೇಹವೇ ಎಲ್ಲರನ್ನೂ ಸಹಯೋಗದಲ್ಲಿ ತಂದಿತು. ಇದೇ ಸ್ನೇಹದ ಶಕ್ತಿಯಿಂದಲೇ ಕೇಂದ್ರಗಳಾದವು. ಆದ್ದರಿಂದ ಆದಿ ಸ್ಥಾಪನೆಯಲ್ಲಿ ಯಾವ ಶಕ್ತಿ ಸಹಯೋಗ ಕೊಟ್ಟಿತೋ ಅಂತ್ಯದಲ್ಲಿಯೂ ಅದೇ ಆಗುವುದು. ಮೊದಲು ಸಾಕಾರ ಸ್ನೇಹದಿಂದಲೇ ಮನ್ಮನಾಭವ ಆದಿರಿ. ಸಾಕಾರ ಸ್ನೇಹವೇ ಸಹಯೋಗಿಯನ್ನಾಗಿ ಮಾಡಿತು ಅಥವಾ ತ್ಯಾಗ ಮಾಡಿಸಿತು. ಸಂಘಟನೆಯ ಅಥವಾ ಸ್ನೇಹದ ಶಕ್ತಿಯಿಂದ ಮುತ್ತಿಗೆ ಹಾಕಬೇಕು. ಈಗ ನೋಡಿ, ಹೊರಗೆ ವಿದೇಶದಲ್ಲಿ ಸೇವೆಯ ಸಫಲತೆಯ ಮೂಲ ಕಾರಣ ಸ್ನೇಹಿ ಮತ್ತು ಸಹಯೋಗಿಯಾಗುವ ಮುತ್ತಿಗೆ ಹಾಕುವುದು. ಜ್ಞಾನದ ಪ್ರ್ಯಾಕ್ಟಿಕಲ್ ಪ್ರಮಾಣ ಇದೇ ಸ್ನೇಹ ಮತ್ತು ಸಂಘಟನೆಯ ಶಕ್ತಿ ಸೇವೆಯ ಸಫಲತೆಯ & ಮುಖ್ಯ ಆಧಾರವೂ ಇದೇ ಆಗಿದೆ. ಎಲ್ಲಿಯೇ ಇದ್ದರೂ, ಸಂದೇಶ ಕೊಡುವ ಕಾರ್ಯ ಬೇಗನೇ ಸಮಾಪ್ತಿ ಯಾವ ರೀತಿ ಯೋಜನೆ ಮಾಡುವುದರಿಂದ ಆಗುವುದು ಎಂದು ಯೋಚಿಸಬೇಕು. ಈಗ ಇನ್ನೂ ಬಹಳ ಇದೆ. ಸ್ನೇಹದಿಂದ ತ್ಯಾಗದ ಜಿಗಿತಕ್ಕೆ ಉತ್ಸಾಹ ಬರುತ್ತದೆ. ತಾವೆಲ್ಲರೂ ಹೇಗೆ ತ್ಯಾಗ ಮಾಡಿದಿರಿ? ರೋಮ-ರೋಮದಲ್ಲಿ ಸ್ನೇಹ ತುಂಬಿತ್ತು, ಆಗ ಜಿಗಿದಿರಿ.

ವಿದೇಶಿಯರಿಗೂ ಬರೆದು ಕಳಿಸಿರಿ – ಈಗ ಹೇಗೆ ಈಶ್ವರೀಯ ನಶೆ ಮತ್ತು ಖುಷಿಯಲ್ಲಿರುತ್ತಾ ಮುಂದುವರೆಯುತ್ತಿರುವಿರಿ. ಅದೇ ರೀತಿ ಸದಾ ನಶೆ ಮತ್ತು ಖುಷಿಯಲ್ಲಿರುತ್ತಾ ಸೇವೆಯಲ್ಲಿ ಸಫಲರಾಗುವಿರಿ. ವಿಜಯದ ತಿಲಕ ಹಚ್ಚಲಾಗಿದೆ. ತಮ್ಮ ವಿಜಯದ ತಿಲಕ ಸದಾ ನೋಡಿಕೊಳ್ಳುತ್ತಿರಿ. ಇಲ್ಲಿಯವರೆಗೆ ಏನು ಮಾಡಿರುವಿರೋ ಅದನ್ನು ಬಾಪ್ ದಾದಾ ಸಹ ನೋಡಿ ಹರ್ಷಿತರಾಗುತ್ತಾರೆ. ಆದರೆ ಮುಂದುವರೆಯಲೇಬೇಕು. ವಾರಸುದಾರರನ್ನು ತಯಾರು ಮಾಡಿ ಆಗಲೇ ಶಾಭಾಷ್

ಎನ್ನುವರು. ಇಲ್ಲಿಯವರೆಗೆ ಏನು ಮಾಡಿರುವಿರೋ ಅದರಲ್ಲಿ ಹರ್ಷಿತರಾಗಬೇಕು. ವಾಹ! ವಾಹ! ಎನ್ನುವ ಕಾರ್ಯ ಈಗ ಮಾಡಬೇಕು. ತಂದೆ ಹರ್ಷಿತರಾಗುತ್ತಾರೆ ಏಕೆಂದರೆ ನಶೆ ಮತ್ತು ಖುಷಿ ಸ್ಥಿರವಾಗಿದೆ. ಇಲ್ಲಿಯವರೆಗಿನ ಫಲಿತಾಂಶ ಬಹಳ ಚೆನ್ನಾಗಿದೆ. ಅವರ ಸೇನಾಪತಿ ಬಹಳ ಸಾಹಸಿಯಾಗಿದ್ದರೆ, ಯಾವುದೇ ಕಾರ್ಯದಲ್ಲಿ ಒಬ್ಬರು ಸಾಹಸದ ಜವಾಬ್ದಾರಿ ತೆಗೆದುಕೊಂಡರೆ ಬೇರೆಯವರು ಜೊತೆಗಾರರಾಗುವರು. ವೈವಿಧ್ಯಮಯ ಗುಂಪಿದ್ದರೂ ಹೂಗುಚ್ಛ ಚೆನ್ನಾಗಿದೆ. ಆದ್ದರಿಂದ ಅಭಿನಂದನೆಗಳು. ಒಳ್ಳೆಯದು.

ಅವ್ಯಕ್ತ ಮುರಳಿ 29-06-1971.

***ಜ್ಞಾನದ ಪ್ರಕಾಶದಿಂದ ಪುರುಷಾರ್ಥದ ಮಾರ್ಗ ಸ್ಪಷ್ಟ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು 'ಮನನ ಶಕ್ತಿ ಮತ್ತು ಸಹನ ಶಕ್ತಿ' - ಈ ಎರಡೂ ಶಕ್ತಿಗಳನ್ನು ಧಾರಣೆ ಮಾಡಿ ಸರ್ವಶಕ್ತಿಗಳನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ, ಮತ್ತು ಎಲ್ಲರಿಗೂ ಸಾಕ್ಷಾತ್ಕಾರ ಮಾಡಿಸಿದ್ದೇನೆ.

2. ನಾನು ಸಹನಶಕ್ತಿಯನ್ನು ಧಾರಣೆ ಮಾಡಿ ನಿರ್ಣಯ ಶಕ್ತಿ, ಪರಿಶೀಲನೆಯ ಶಕ್ತಿ, ಗಂಭೀರತೆಯ ಶಕ್ತಿಯನ್ನು ಜೊತೆಜೊತೆಗೆ ಪಡೆದಿದ್ದೇನೆ.

3. ನಾನು ಮನಸ್ಸಿಗಾಗಿ ಮನನ ಶಕ್ತಿ ಮತ್ತು ವಾಚಾ - ಕರ್ಮಣಕ್ಕಾಗಿ ಸಹನ ಶಕ್ತಿಯನ್ನು ಧಾರಣೆ ಮಾಡಿರುವ ಸಫಲತಾ ಸ್ವರೂಪ.

4. ನಾನು ಸಹನ ಶಕ್ತಿಯಿಂದ ಮನಸ್ಸಿನ ಸಂಕಲ್ಪಗಳನ್ನು, ವ್ಯರ್ಥ ಸಂಕಲ್ಪಗಳನ್ನು ನಿಯಂತ್ರಣ ಮಾಡಿದ್ದೇನೆ.

5. ನಾನು ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ ಸ್ವಯಂ ಅನ್ನು ವ್ಯಸ್ತವಾಗಿಟ್ಟುಕೊಂಡು ನನ್ನ ಮತ್ತು ಇತರರ ಸಂಪಾದನೆಯನ್ನು ಮಾಡಿಸುವ ನಂಬರ್ ಒನ್ ವ್ಯಾಪಾರಸ್ಥನು.

6. ನಾನು ಬುದ್ಧಿಯನ್ನು ಬ್ಯುಸಿಯಾಗಿ ಇಟ್ಟುಕೊಂಡು ಹಳೆಯ ಸಂಸ್ಕಾರಗಳನ್ನು, ಶರೀರದ ಕರ್ಮದ ಖಾತೆಯನ್ನು ಸಮಾಪ್ತಿ ಮಾಡಿಕೊಂಡು, ಸೇವಾರ್ಥ ಈ ಶರೀರಕ್ಕೆ ನಿಮಿತ್ತ ಮಾತ್ರವಾಗಿ ಸೇವೆ ಮಾಡುವ ಸಾಕ್ಷೀ ಸ್ಥಿತಿ ಸ್ವರೂಪ.

7. ನಾನು ದೈವೀ ಪರಿವಾರ ಮತ್ತು ಬಾಪ್ ದಾದಾರವರಿಂದ ಲಭಿಸಿರುವ ಬಹುಮಾನದಿಂದ ತಂದೆಯ ಮತ್ತು ಕುಲದ ಹೆಸರನ್ನು ಪ್ರಸಿದ್ಧಿ ಮಾಡಿದ್ದೇನೆ.

8. ನಾನು ಬುದ್ಧಿಯ ಸಂಲಗ್ನತೆಯಿಂದ ಎಲ್ಲರನ್ನು ತಂದೆಯ ಕಡೆಗೆ ಮತ್ತು ಯಜ್ಞದ ಕಡೆಗೆ ನಡೆಸುವಂತಹ ಸ್ನೇಹಿ ಮತ್ತು ಸಹಯೋಗಿ.

9. ನಾನು ಸ್ನೇಹ ಮತ್ತು ಸಂಘಟನಾ ಶಕ್ತಿಯಿಂದ ಸೇವೆಯಲ್ಲಿ ಸಫಲತೆಯನ್ನು ಹೊಂದಿರುವ ವಿಜಯತಿಲಕಧಾರಿ.

10. ವಿಶ್ವದ ಜವಾಬ್ದಾರಿಯ ಪ್ರತಿ ನನ್ನ ಧೈರ್ಯದ ಮೊದಲ ಹೆಜ್ಜೆ ಎಲ್ಲರ ಸಂಘಟನೆಯನ್ನು ಒಟ್ಟುಗೂಡಿಸಿದೆ.